ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ/35/ಎಲ್ಆರ್‌ಡಿಸಿ/ಎನ್‌ಬಿಎ/2014-15

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ
ಅರಮನೆ ರಸ್ತೆ ಬೆಂಗಳೂರು-560001
ದಿನಾಂಕ: 30-3-2016

## ಸುತ್ತೋಲೆ

ವಿಷಯ : ಮಾನ್ಯತಾ ಕಾರ್ಯಗಾರ ನಡೆಸುವ (ಎನ್.ಬಿ.ಎ) ಕುರಿತು-

ಉಲ್ಲೇಖ: ಪ್ರಾಚಾರ್ಯರು, ಸರ್ಕಾರಿ ಪಾಲಿಟೆಕ್ನಿಕ್ ಗಜೇಂದ್ರಘಡ, ಇವರ ಮನವಿ ಪತ್ರ ಸಂಖ್ಯೆ: ಸಪಾಗ/ಸಿಬ್ಬಂದಿ/2015-16/307 ದಿನಾಂಕ: 17-3-2016 ಹಾಗೂ ಇವರೊಂದಿಗಿನ ದೂರವಾಣಿ ಸಂಭಾಷಣೆ

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಹಾಗೂ ಉಲ್ಲೇಖದ ಮನವಿಯಂತೆ ಗದಗ ಮತ್ತು ಕೊಪ್ಪಳ ಜಿಲ್ಲೆಗಳ ವ್ಯಾಪ್ತಿಗೆ ಒಳಪಡುವ ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರು ಹಾಗೂ ಸಂಸ್ಥೆಯ ಕಾರ್ಯಕ್ರಮಗಳ ಮಾನ್ಯತಾ ಸಂಯೋಜಕರುಗಳಿಗೆ ಎರಡು ದಿನಗಳ ಮಾನ್ಯತಾ ಕಾರ್ಯಗಾರವನ್ನು ಈ ಕೆಳಕಂಡ ವೇಳಪಟ್ಟಿಯಂತೆ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ. ಈ ಕಾರ್ಯಗಾರದಲ್ಲಿ ಸಂಸ್ಥೆಗಳ ಪ್ರಾಂಶುಪಾಲರು ಹಾಗೂ ಮಾನ್ಯತೆ ಪಡೆಯಲಿಚ್ಚಿಸಿರುವ ಕಾರ್ಯಕ್ರಮಗಳ ಸಂಯೋಜಕರುಗಳು ಭಾಗವಹಿಸಿ, ಇಲ್ಲಿಯವರೆಗೆ ತಮ್ಮ ತಮ್ಮ ಕಾರ್ಯಕ್ರಮಗಳಿಗೆ ಸಂಬಂಧಿಸಿದ ತುಂಬಿದ ಸ್ವಯ ಮೌಲ್ಯಮಾಪನಾ ವರದಿಗಳನ್ನು (SAR) ಈ ಕಾರ್ಯಗಾರಕ್ಕೆ ತಂದು ತಮ್ಮಲ್ಲಿ ಉದ್ಭವಿಸಿದ ಎಲ್ಲಾ ಪ್ರಶ್ನೆ/ಸಂಶಯಗಳನ್ನು ನಿವಾರಿಸಿಕೊಂಡು ತಪ್ಪದೆ ಹಾಜರಾಗಿ ರಾಷ್ಟ್ರೀಯ ಮಾನ್ಯತಾ ಮಂಡಳಿಯಿಂದ ಮಾನ್ಯತೆ ಪಡೆದುಕೊಳ್ಳಲು ಸೂಚಿಸಿದೆ.

| ಸ್ಥಳ | ದಿನಾಂಕ/ವೇಳೆ | ಭಾಗವಹಿಸಬೇಕಾದ ಸಂಸ್ಥೆಗಳು |
|---|---|---|
| ಸರ್ಕಾರಿ ಪಾಲಿಟೆಕ್ನಿಕ್ ಗಜೇಂದ್ರಘಡ<br><br>ಪ್ರಾಚಾರ್ಯರು:<br>ಶ್ರೀ ಎಸ್. ಟಿ ಭೈರಪ್ಪನವರ,<br>ಮೊ ಸಂಖ್ಯೆ: 9902609406 | 5-4-2016<br>ಬೆಳಿಗ್ಗೆ 9 ಗಂಟೆಯಿಂದ<br><br>6-4-2016<br>(ಸರ್ಕಾರಿ ಪಾಲಿಟೆಕ್ನಿಕ್ ಗಜೇಂದ್ರಘಡರವರಿಗೆ ಮಾತ್ರ) | 1. ಸರ್ಕಾರಿ ಪಾಲಿಟೆಕ್ನಿಕ್, ಗದಗ<br>2. ಸರ್ಕಾರಿ ಪಾಲಿಟೆಕ್ನಿಕ್, ಕೊಪ್ಪಳ<br>3. ಸರ್ಕಾರಿ ಪಾಲಿಟೆಕ್ನಿಕ್, ಕುಶ್ಟಗಿ<br>4. ಸರ್ಕಾರಿ ಪಾಲಿಟೆಕ್ನಿಕ್, ಕರಾಟಗಿ<br>5. ಆರ್.ಟಿ. ಇ ಎಸ್ ಪಾಲಿಟೆಕ್ನಿಕ್, ಹುಲಕೋಟಿ<br>6. ಅನಜುಮನ್-ಇ-ಇಸ್ಲಾಮ್ ಪಾಲಿಟೆಕ್ನಿಕ್, ಗದಗ<br>7. ವಿ.ಜಿಇಟಿಎಸ್. ಡಾ॥ ಜಿಎಸ್ಎಂಆರ್‌ಪಾಲಿಟೆಕ್ನಿಕ್ ಕುಕನೂರ |

ಈ ಕಾರ್ಯಗಾರವನ್ನು ನಿರ್ದೇಶನಾಲಯದ ಮಾನ್ಯತಾ ಕೋಶದ ಈ ಕೆಳಕಂಡ ಅಧಿಕಾರಿಗಳು ನಡೆಸಿಕೊಡಲು ನಿಯೋಜಿಸಲಾಗಿದೆ:

1. ಶ್ರೀ ಸತೀಶ ರ ಹುದ್ದಾರ, ಉಪ ನಿರ್ದೇಶಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
2. ಶ್ರೀ ಎಸ್.ಜಿ ವೆಂಕಟೇಶಬಾಬು, ಮಾನ್ಯತಾ ಸಂಯೋಜಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.

...2

3. ಶ್ರೀ ಬಿ.ಎಸ್ ವಾಸುಕಿ, ಮಾನ್ಯತಾ ಸಂಯೋಜಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
4. ಶ್ರೀ ಭರತ್‌ಲಾಲ್ ಎ.ಆರ್, ಮಾನ್ಯತಾ ಸಂಯೋಜಕರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.

ಮೇಲ್ಕಂಡ ತರಬೇತಿದಾರ–ಅಧಿಕಾರಿಗಳು ಕೆ.ಸಿ.ಎಸ್.ಆರ್ ನಿಯಮಾವಳಿಗಳ ಪ್ರಕಾರ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಗೆ ಅರ್ಹರಾಗಿರುತ್ತಾರೆ.

ನಿರ್ದೇಶಕರು

ಇವರಿಗೆ:

1. ಸಂಬಂಧಿಸಿದ ಪ್ರಾಂಶುಪಾಲರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ, ಸದರಿಯವರು ಕಾರ್ಯಗಾರಕ್ಕೆ ಭಾಗವಹಿಸುವವರ ಪಟ್ಟಿಯನ್ನು ಪ್ರಾಚಾರ್ಯರು, ಸರ್ಕಾರಿ ಪಾಲಿಟೆಕ್ನಿಕ್ ಗಜೇಂದ್ರಘಡ, ಇವರಿಗೆ ಎರಡು ದಿನ ಮುಂಚಿತವಾಗಿಯೇ ಸಲ್ಲಿಸುವುದು.
2. ಪ್ರಾಚಾರ್ಯರು, ಸರ್ಕಾರಿ ಪಾಲಿಟೆಕ್ನಿಕ್ ಗಜೇಂದ್ರಘಡ, ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
3. ಇ–ಆಡಳಿತ ಸಂಯೋಜಕರ ಸೂಕ್ತ ಕ್ರಮಕ್ಕಾಗಿ
4. ನಿರ್ದೇಶಕರ ಆಪ್ತ ಸಹಾಯಕ ಮಾಹಿತಿಗಾಗಿ
5. ಕಡತ ಪ್ರತಿ